ಕರ್ನಾಟಕ ಸರ್ಕಾರ
ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್,
# 70, 2ನೇ ಮಹಡಿ, ಕೆ.ಎಂ.ಸಿ. ಬಿಲ್ಡಿಂಗ್, ಬಸವನಗುಡಿ ಪೋಸ್ಟ್ ಆಫೀಸ್ ಎದುರು, ಕೆ.ಆರ್. ರಸ್ತೆ, ಬಸವನಗುಡಿ, ಬೆಂಗಳೂರು-560 004
ಇ-ಮೇಲ್ : yeshtrust@gmail.com ದೂರವಾಣಿ: 080-26671616

ಸಂಖ್ಯೆ:ಯಶಸ್ವಿನಿ/ಸಿಡಬ್ಲ್ಯೂ-1/ಸುತ್ತೋಲೆ-1/2018-19 ದಿನಾಂಕ:15-05-2018

# ಸುತ್ತೋಲೆ

ವಿಷಯ : ಯಶಸ್ವಿನಿ ಯೋಜನೆಯ ಅನುಷ್ಠಾನದ ಅವಧಿಯ ಬಗ್ಗೆ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಆಕುಕ 91 ಸಿಜಿಇ 2017, ಬೆಂಗಳೂರು, ದಿನಾಂಕ 01-03-2018
2. ಯಶಸ್ವಿನಿ ಟ್ರಸ್ಟ್ ಸಭೆಯ ನಡವಳಿ ದಿನಾಂಕ : 05-05-2018

* * *

ಯಶಸ್ವಿನಿ ಯೋಜನೆಯಡಿ ನೆಟ್‌ವರ್ಕ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿರುವ ನೆಟ್‌ವರ್ಕ್ ಆಸ್ಪತ್ರೆಗಳು ಉಲ್ಲೇಖ (1)ರ ಸರ್ಕಾರದ ಆದೇಶದಂತೆ ಹಾಗೂ ಉಲ್ಲೇಖ (2)ರ ಸಭೆಯ ನಿರ್ಣಯದಂತೆ ಯಶಸ್ವಿನಿ ಯೋಜನೆಯಡಿ ಪ್ರೀ-ಆಥ್ ಸಲ್ಲಿಸಲು ದಿ: 31-05-2018 ಕೊನೆಯ ದಿನವಾಗಿರುತ್ತದೆ. ಸದರಿ ಪ್ರೀ-ಆಥ್‌ಗಳಿಗೆ ಸಂಬಂಧಿಸಿದಂತೆ ಶಸ್ತ್ರಚಿಕಿತ್ಸೆ ನಡೆಸಲು ದಿ: 30-06-2018 ಕೊನೆಯ ದಿನವಾಗಿರುತ್ತದೆ.

ದಿ: 31-05-2018ರೊಳಗಾಗಿ ಸಲ್ಲಿಸಿರುವ ಪ್ರೀ-ಆಥ್‌ಗಳಿಗೆ SAST ವತಿಯಿಂದ 'Need more info' ಕೇಳಿದ್ದಲ್ಲಿ, ದಿ: 03-06-2018ರೊಳಗೆ 'Need more info' ಸಲ್ಲಿಸಿ ಅನುಮೋದನೆ ಪಡೆಯಲು ಕ್ರಮವಿಡುವುದು. ದಿ: 03-06-2018ರ ನಂತರ ಸಲ್ಲಿಸುವ 'Need more info' ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಪ್ರೀ-ಆಥ್/ಮಾಹಿತಿಗೆ ಯಶಸ್ವಿನಿ ಟ್ರಸ್ಟ್ ಜವಾಬ್ದಾರರಾಗಿರುವುದಿಲ್ಲ.

ಎಲ್ಲಾ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳು ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್

ಪ್ರತಿಯನ್ನು:

- ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
- ಪ್ರಾಜೆಕ್ಟ್ ಮ್ಯಾನೇಜರ್, ಯಶಸ್ವಿನಿ ಯೋಜನೆ-ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಕಳುಹಿಸುತ್ತಾ ಸದರಿ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ತಿಳಿಸಿದೆ.
- ಎಲ್ಲಾ ಪ್ರಾಂತಗಳ ಪ್ರಾದೇಶಿಕ ಸಮಾಲೋಚಕರಿಗೆ ಮಾಹಿತಿಗಾಗಿ ಕಳುಹಿಸಿದೆ.
- ಎಲ್ಲಾ ಜಿಲ್ಲೆಗಳ ಕೋ_ಆರ್ಡಿನೇಟರ್‌ಗಳಿಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ನೆಟ್ ವರ್ಕ್ ಆಸ್ಪತ್ರೆಗಳಿಗೆ ಕಳುಹಿಸಿ ಸ್ವೀಕೃತಿ ಪಡೆಯಲು ಸೂಚಿಸಿದೆ.
- ಎಲ್ಲಾ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಕಛೇರಿ ಕಡತಕ್ಕೆ